ಗುಲ್ಬರ್ಗಾ ನಗರಕ್ಕೆ ಭೀಮಾ ನದಿಯಿಂದ ಕುಡಿಯುವ ನೀರನ್ನು ಸರಬರಾಜು ಮಾಡುವ ಯೋಜನೆಯ ಬಗ್ಗೆ

೧೬೫ (೯೮) ಶ್ರೀ ಎಸ್. ಕೆ. ಕಾಂತ (ಗುಲ್ಬರ್ಗಾ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಗುಲ್ಬರ್ಗಾ ನಗರಕ್ಕೆ ಭೀಮಾ ನದಿಯಿಂದ ಕುಡಿಯುವ ನೀರಿನ ಸರಬರಾಜು ಮಾಡುವ ಯೋಜನೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯವರು ಕೈಗೊಂಡಿದ್ದುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಯೋಜನೆ ಯಾವಾಗ ಪ್ರಾರಂಭವಾಗಿ ಎಂದು ಮುಕ್ತಾಯಗೊಳ್ಳುತ್ತದೆ?

ಇ) ಗುಲ್ಬರ್ಗಾ ನಗರದ ಜನರಿಗೆ ಯಾವ ವರ್ಷ ಮತ್ತು ತಿಂಗಳಲ್ಲಿ ಕುಡಿಯುವ ನೀರನ್ನು ಒದಗಿಸಲಾಗುವುದು ?

ಪ್ರೊ॥ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಂಸದೀಯ ವ್ಯವಹಾರ, ಆಹಾರ ಮಂತ್ರಿಗಳು).—

ಅ) ಬಂದಿದೆ.

ಆ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ಈ ಯೋಜನೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಕಳುಹಿಸಿದೆ. ಇದಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಜೂನ್ ೧೯೮೮ರ ವೇಳೆಗೆ ಈ ಯೋಜನೆಯನ್ನು ಪೂರೈಸಿ ನಗರಕ್ಕೆ ನೀರನ್ನು ಒದಗಿಸಲು ಉದ್ದೇಶಿಸಲಾಗಿದೆ.

ಶ್ರೀ ಎಸ್. ಕೆ. ಕಾಂತಾ.—ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ನಗರಕ್ಕೆ ಶಾಶ್ವತವಾದಂಥ ನೀರು ಸರಬರಾಜು ಮಾಡುವುದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಯವರು ೨-೫-೮೫ರಲ್ಲೇ ನಗರಕ್ಕೆ ಎರಡು ವರ್ಷಗಳ ನೀರು ಕೊಡಲಾಗುವುದೆಂದು ಈ ಸದನದಲ್ಲಿಯೇ ಹೇಳಿದ್ದಾರೆ. ೧೯೭೨ ರಿಂದಲೂ ಸತತವಾಗಿ ಗುಲ್ಬರ್ಗಾ ನಗರದಲ್ಲಿ ನೀರಿನ ಬರ ಇದೆ. ಸಚಿವರು ಹೇಳಿದ ಪ್ರಕಾರ ೧೯೮೬ರ ಮೇ ತಿಂಗಳ ಹೊತ್ತಿಗೆ ಇದು ಆಗಬೇಕಾಗಿತ್ತು. ನೀವು ಈಗ ಏನು ಯೋಜನೆ ಹಾಕಿಕೊಂಡಿದ್ದೀರಿ, ಅದು ಎಲ್ಲಿಗೆ ಬಂದಿದೆ ? ಎಷ್ಟು ಖರ್ಚು ಮಾಡಿದ್ದೀರಿ ? ಯಾವ ರೀತಿಯಾಗಿ ಕೆಲಸ ಆಗುತ್ತಿದೆ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೆ ಸಹಕಾರ ಕೊಂಡಿರತಕ್ಕ, ಯೋಜನೆಗಳ ಪ್ರಕಾರ, ಬೆಣ್ಣೆತೊರೆ ಮತ್ತು ಭೋಸ್ಗಾ ಮೂಲಗಳಿಂದ ಸಿಗತಕ್ಕಂಥ ನೀರು ಕಡಿಮೆ ಪ್ರಮಾಣದ್ದು. ಅನಿಶ್ಚಿತ ಎಂಬ ಮಾದ ಪ್ರಾರಂಭದಿಂದಲೂ ಇತ್ತು. ಈ ಮಧ್ಯೆ ಭೀಮಾ ನದಿಯಿಂದ ನೀರು ತೆಗೆದು ಕೊಂಡರೆ, ಅಲ್ಲಿ ಹೆಚ್ಚು ನೀರು ಸಿಗುತ್ತದೆ ಮತ್ತು ಶಾಶ್ವತವಾದಂಥ ನೀರು ಸಿಕ್ಕುವ ಮೂಲವೆಂದು, ಈ ಯೋಜನೆಯನ್ನು ಪರಿಶೀಲನೆ ಮಾಡಿ ಎಂದು ಸರ್ಕಾರಕ್ಕೆ ಕಳುಹಿಸಿಕೊಟ್ಟಿದೆ. ಸರ್ಕಾರ ಪರಿಶೀಲನೆ ಮಾಡುತ್ತಿದೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಎಸ್ ಕೆ. ಕಾಂತಾ.—ಪರಿಶೀಲನೆಯಲ್ಲಿರತಕ್ಕಂಥ ಮಾತು ನನಗೆ ತಿಳಿದ ಮಟ್ಟಿಗೆ ಸರಿಯಲ್ಲ. ಏಕೆಂದರೆ ಈಗಾಗಲೇ ಅಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಬಹಳ ಗಂಭೀರವಾಗಿದ್ದು, ಎರಡು ವರ್ಷಗಳಿಂದ ಅಲ್ಲಿ ಮಳೆ ಬರುತ್ತಾ ಇಲ್ಲ. ಕೇವಲ ಬೋರ್‌ವೆಲ್‌ಗಳಿಂದ ನೀರು ಸಿಗುತ್ತಾ ಇದೆ. ಅದೂ ಒಂದು ಕೊಡ, ಎರಡು ಕೊಡ ನೀರು ಸಿಗುತ್ತಿದೆ. ಆದರೆ ನೀವು ಯಾವ ಯೋಜನೆಯನ್ನು ಸಿದ್ಧತೆ ಮಾಡಿದ್ದೀರಿ, ಅದರ ಮೇಲೆ ಎಷ್ಟು ಖರ್ಚಾಯಿತು ಎಂಬುದನ್ನು ಕೇಳಿದ್ದೇನೆ. ಮೊದಲನೆಯ ಯೋಜನೆಯನ್ನು ಕೈಬಿಡಲಾಯಿತೇ ? ಈಗ ತೆಗೆದುಕೊಂಡಿರುವ ಯೋಜನೆಯನ್ನು ಯಾವ ರೀತಿಯಿಂದ ಮುಂಗಸತ್ತೀರಿ ? ನಮಗೆ ಖಚಿತವಾದ ಉತ್ತರಬೇಕು. ನಾವು ಅಲ್ಲಿನ ಜನರಿಗೆ ಯಾವ ರೀತಿಯ ಉತ್ತರವನ್ನೂ ಹೇಳುವ ಪರಿಸ್ಥಿತಿ ಇಲ್ಲ. ೧೯೭೭ ರಿಂದ ಈವರೆಗೆ ಇಂತಹ ಯೋಜನೆ ಮಾಡುತ್ತೇವೆ ಎನ್ನುವುದನ್ನು ಸದನದ ಮುಂದೆ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಈಗ ಅದನ್ನು

ಬದಲಾಯಿಸಿ ಮತ್ತೊಂದು ಯೋಜನೆಯನ್ನು ಮಾಡುತ್ತಿದ್ದಾರೆ. ಭೀಮಾ ನದಿಯಿಂದ ನೀರನ್ನು ಒದಗಿಸುವ ಯೋಜನೆಯನ್ನು ಮಾಡುತ್ತೀರಾ ಅಥವಾ ಬೆಣ್ಣೆತೊರೆ ಯೋಜನೆಯನ್ನೇ ಮುಂದುವರಿಸುತ್ತೀರಾ ? ಈವರೆಗೆ ಖರ್ಚು ಮಾಡಿರತಕ್ಕ ಹಣ ಏನಾಯಿತು ?

ಅಧ್ಯಕ್ಷರು.—ಮಾನ್ಯ ಕಾಂತಾರವರೇ, ನೀವು ಭಾಷಣ ಮಾಡುತ್ತಿದ್ದೀರಿ, ದಯವಿಟ್ಟು ಪ್ರಶ್ನೆ ಕೇಳಿ. ಪಾಯಿಂಟ್ಸ್ ಮಾತ್ರ ಕೇಳಬೇಕು.

ಶ್ರೀ ಎಸ್. ಕೆ. ಕಾಂತಾ.—ಅಧ್ಯಕ್ಷರೇ ಇವತ್ತಿನ ಪರಿಸ್ಥಿತಿ ಹಾಗೆ ಇದೆ. ೧೯೫೮ರ ಒಳಗಾಗಿ ಗುಲಬರ್ಗಾ ನಗರಕ್ಕೆ ನೀರು ಸರಬರಾಜು ಮಾಡುವಂತಹ ಶಾಶ್ವತ ಕಾರ್ಯಕ್ರಮ ಹಾಕಿಕೊಳ್ಳತಕ್ಕದ್ದು.....

ಅಧ್ಯಕ್ಷರು.—ತಾವು ಭಾಷಣ ಮಾಡುವುದಕ್ಕೆ ಶುರುಮಾಡಿದ್ದೀರೋ ಪ್ರಶ್ನೆ ಕೇಳುತ್ತಿದ್ದೀರೋ

ಶ್ರೀ ಎಸ್. ಕೆ. ಕಾಂತಾ.—ಶಾಶ್ವತ ಯೋಜನೆಯನ್ನು ಹಾಕಿಕೊಳ್ಳುವ ವಿಚಾರವನ್ನು ಮೊದಲಿನಿಂದಲೂ ಹೇಳುತ್ತಿದ್ದಾರೆ. ಅಧ್ಯಕ್ಷರೇ, ಭೀಮಾನದಿ ನೀರು ಸರಾಬರಾಜು ಯೋಜನೆ ಬಗ್ಗೆ ಖಚಿತವಾಗಿ ಹೇಳಬೇಕು. ಪರಿಶೀಲಿಸಲಾಗುವುದು ಎಂದು ಹೇಳಿ ಅದರಲ್ಲಿಯೇ ಒಂದೆರಡು ವರ್ಷ ಹೋದರೆ, ಜನ ಕಷ್ಟಕ್ಕೀಡಾಗುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಸನ್ಮಾನ್ಯ ಸದಸ್ಯರು ಗುಲಬರ್ಗಾ ನಗರದ ನೀರಿನ ಸಮಸ್ಯೆಯ ಬಗ್ಗೆ ಹೇಳಿದ್ದಾರೆ ನಿಜ. ಅಲ್ಲಿ ಸಮಸ್ಯೆ ಇದೆ. ನೀರಿನ ಸಮಸ್ಯೆ ಬಗೆಹರಿಯುವುದಕ್ಕೆ ಕೊಳವೆ ಬಾವಿಗಳನ್ನು ತೆಗೆದು ಅದಕ್ಕೆ ಸಾಕಷ್ಟು ಹಣವನ್ನೂ ಸಹ ಹೋದ ವರ್ಷ ಬಿಡುಗಡೆ ಮಾಡಿದ್ದೇವೆ ಎಂಬ ವಿಚಾರ ಕೂಡಾ ಸನ್ಮಾನ್ಯ ಸದಸ್ಯರು ತಿಳಿದುಕೊಂಡಿದ್ದಾರೆ. ಈ ಒಂದು ಯೋಜನೆಯಿಂದ ಹೆಚ್ಚು ನೀರು ಸಿಗತಕ್ಕಂಥ ಸಂಭವ ಇದೆ ಎನ್ನತಕ್ಕಂಥ ಒಂದು ಸೂಚನೆ ಬಂದಿದೆ. ಸರಕಾರ ಇದನ್ನು ಪರಿಶೀಲನೆ ಮಾಡುತ್ತದೆ ಎಂಬ ಮಾತನ್ನೂ ಹೇಳಿದ್ದೇನೆ. ಖಚಿತವಾಗಿ ಯಾವಾಗ ಮಾಡುತ್ತೀರಿ ಹೇಳಿ ಎಂದು ಹೇಳಿದರೆ, ಹಣದ ಯೋಚನೆ ಮಾಡಬೇಕಾಗುತ್ತದೆ, ತಾಂತ್ರಿಕ ಪರಿಶೀಲನೆ ಮಾಡಬೇಕಾಗುತ್ತದೆ, ಇವುಗಳನ್ನೆಲ್ಲಾ ಯೋಚನೆ ಮಾಡಿ ನೀರು ಒದಗಿಸಲಿಕ್ಕೆ ಪ್ರಯತ್ನ, ಆದರೆಷ್ಟು ಬೇಗ ಮಾಡಬೇಕೆಂದು ಬತ್ತಾಯ ಮಾಡುತ್ತಿದ್ದಾರೋ ಅಷ್ಟೆ ಒಂದು ತೀಕ್ಷ್ಣತೆಯಿಂದ ಮಾಡುವುದಕ್ಕೆ ನಾವು ಉದ್ದೇಶ ಇಟ್ಟುಕೊಂಡಿದ್ದೇವೆ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮೈಸೂರು ನಗರದಲ್ಲಿರುವ ರೆವಿನ್ಯೂ ಬಡಾವಣೆಗಳನ್ನು ಕ್ರಮಗೊಳಿಸುವ ಬಗ್ಗೆ

೧೬೬ (೧೩೫) ಶ್ರೀಮತಿ ಮುಕ್ತರ್ ಉನ್ನೀಸಾ ಬೇಗಂ.(ನರಸಿಂಹರಾಜ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಹಾರ ಹಾಗೂ ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಮೈಸೂರಿನ ೨೪ ರೆವಿನ್ಯೂ ಬಡಾವಣೆಗಳಿಗೆ ಸರ್ಕಾರದವರು ಕ್ರಮಗೊಳಿಸಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ ?

ಆ) ಹಾಗಿಲ್ಲದಿದ್ದಲ್ಲಿ, ಯಾವಾಗ ಕ್ರಮಗೊಳಿಸಲಾಗುತ್ತದೆ ?

ಪ್ರೊ।। ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು, ಸಂಸದೀಯ ಆಹಾರ ಮಂತ್ರಿಗಳು).—

ಅ) ಮೈಸೂರಿನ ಅನಧಿಕೃತ ನಿರ್ಮಾಣದ ಬಡಾವಣೆಗಳಿಗೆ ಸಮಿತಿಯನ್ನು ರಚನೆ ಮಾಡಲು ಸರ್ಕಾರವು ಒಂದು ಮಾರ್ಗದರ್ಶನವನ್ನು ಹೊರಡಿಸಲಾಗಿದೆ. ಎನ್ಯೂಮರೇಷನ್ ಕೆಲಸವು ಮುಗಿದಿರುತ್ತದೆ. ಅನಧಿಕೃತ ನಿರ್ಮಾಣದ ಬಗ್ಗೆ ಸದ್ಯದಲ್ಲಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಆ) ೩೧-೩-೧೯೮೭ ರೊಳಗೆ ಅನಧಿಕೃತ ನಿರ್ಮಾಣದ ಬಗ್ಗೆ ಸೂಕ್ತ ಕ್ರಮದ ಬಗ್ಗೆ ನಿರೀಕ್ಷಿತ ವಾಗಿದೆ.

ಶ್ರೀಮತಿ ಮುಕ್ತರುನ್ನೀಸಾ.—ಸನ್ಮಾನ್ಯ ಅಧ್ಯಕ್ಷರೇ ನನ್ನ ಒಂದನೇ ಪ್ರಶ್ನೆಗೆ ಉತ್ತರದಲ್ಲಿ "enumeration work has been completed" ಎಂದು ಇದೆ. Before the enumeration work started they would have conducted the